6. ಇವರು ಅದನ್ನು ದೂರವೆಂದು ಭಾವಿಸುತ್ತಾರೆ-	إِنَّهُمْ يَرَوْنَهُۥ بَعِيدًا ۝٦
7. ಮತ್ತು ನಾವು ಅದನ್ನು ಸಮೀಪದಲ್ಲಿ ಕಾಣುತ್ತಿದ್ದೇವೆ.	وَنَرَىٰهُ قَرِيبًا ۝٧
8. (ಆ ಯಾತನೆ ಸಂಭವಿಸುವ) ಆ ದಿನ ಆಕಾಶವು ಕರಗಿದ ಬೆಳ್ಳಿಯಂತಾಗುವುದು-[5]	يَوْمَ تَكُونُ ٱلسَّمَآءُ كَٱلْمُهْلِ ۝٨
9. ಮತ್ತು ಪರ್ವತಗಳು ಬಣ್ಣ ಬಣ್ಣದ ಹಿಂಜಿದ ಉಣ್ಣೆಯಂತಾಗುವುವು-	وَتَكُونُ ٱلْجِبَالُ كَٱلْعِهْنِ ۝٩
10. ಮತ್ತು ಯಾವ ಆಪ್ತ ಮಿತ್ರನೂ ತನ್ನ ಆಪ್ತ ಮಿತ್ರನನ್ನು ವಿಚಾರಿಸಲಾರನು.	وَلَا يَسْـَٔلُ حَمِيمٌ حَمِيمًا ۝١٠
11-14. ವಸ್ತುತಃ ಅವರು ಪರಸ್ಪರರಿಗೆ ತೋರಿಸಲ್ಪಡುವರು. ಅಪರಾಧಿಯು ಅಂದಿನ ಯಾತನೆಯಿಂದ ಪಾರಾಗಲಿಕ್ಕಾಗಿ ತನ್ನ ಮಕ್ಕಳನ್ನು, ತನ್ನ ಪತ್ನಿಯನ್ನು, ತನ್ನ ಸಹೋದರರನ್ನು, ತನಗೆ ಆಶ್ರಯ ನೀಡುತ್ತಿದ್ದ ತನ್ನ ಅತ್ಯಂತ ಆಪ್ತ ಕುಟುಂಬವನ್ನು ಮತ್ತು ಭೂಮುಖದಲ್ಲಿರುವ ಎಲ್ಲ ಜನರನ್ನೂ ಪರಿಹಾರವಾಗಿ ಕೊಡಬಯಸುವನು ಮತ್ತು ಈ ಪರಿಹಾರವು ತನ್ನನ್ನು ಪಾರುಗೊಳಿಸಬಹುದೆಂದು ಭಾವಿಸುವನು.	يُبَصَّرُونَهُمْ ۚ يَوَدُّ ٱلْمُجْرِمُ لَوْ يَفْتَدِى مِنْ عَذَابِ يَوْمِئِذٍۭ بِبَنِيهِ ۝١١ وَصَٰحِبَتِهِۦ وَأَخِيهِ ۝١٢ وَفَصِيلَتِهِ ٱلَّتِى تُـْٔوِيهِ ۝١٣ وَمَن فِى ٱلْأَرْضِ جَمِيعًا ثُمَّ يُنجِيهِ ۝١٤
15. ಖಂಡಿತ ಇಲ್ಲ. ಅದು ಧಗಧಗಿಸುವ ಅಗ್ನಿಯ ಜ್ವಾಲೆಯಾಗಿರುವುದು-	كَلَّآ ۖ إِنَّهَا لَظَىٰ ۝١٥
16. ಅದು ಮಾಂಸವನ್ನೂ ಚರ್ಮವನ್ನೂ ನೆಕ್ಕಿ ಬಿಡುವುದು.	نَزَّاعَةً لِّلشَّوَىٰ ۝١٦
17-18. ಸತ್ಯದಿಂದ ವಿಮುಖನಾದ, ಬೆನ್ನು ತಿರುಗಿಸಿದ, ಸಂಪತ್ತನ್ನು ಕಲೆ ಹಾಕಿದ ಮತ್ತು ಜೋಪಾನವಾಗಿ ಸಂಗ್ರಹಿಸಿಟ್ಟ ಪ್ರತಿಯೊಬ್ಬನನ್ನೂ ಕೂಗಿ ಕೂಗಿ ತನ್ನ ಕಡೆಗೆ ಕರೆಯುವುದು.	تَدْعُوا۟ مَنْ أَدْبَرَ وَتَوَلَّىٰ ۝١٧ وَجَمَعَ فَأَوْعَىٰٓ ۝١٨
19. ಮಾನವನು ಚಂಚಲನಾಗಿಯೇ ಸೃಷ್ಟಿಸಲ್ಪಟ್ಟಿದ್ದಾನೆ.[6]	إِنَّ ٱلْإِنسَٰنَ خُلِقَ هَلُوعًا ۝١٩
20. ಅವನಿಗೆ ಸಂಕಷ್ಟ ಬಂದಾಗ ಗಾಬರಿಗೊಳ್ಳುತ್ತಾನೆ-	إِذَا مَسَّهُ ٱلشَّرُّ جَزُوعًا ۝٢٠

5. ಅರ್ಥಾತ್- ಪ್ರತಿ ಬಾರಿಗೂ ಅದು ಬಣ್ಣ ಬದಲಾಯಿಸುವುದು.
6. ನಮ್ಮ ಭಾಷೆಯಲ್ಲಿ ಇದನ್ನು ನಾವು ಹೀಗೆನ್ನುತ್ತೇವೆ, "ಇದು ಅವನ ಹುಟ್ಟು ಗುಣ" ಅಥವಾ "ಇದು ಅವನ ಸಹಜ ದೌರ್ಬಲ್ಯ" ಅದನ್ನೇ ಅಲ್ಲಾಹನು, "ಮಾನವ ಹೀಗೆಯೇ ಸೃಷ್ಟಿಸಲ್ಪಟ್ಟಿದ್ದಾನೆ" ಎಂದು ವಿವರಿಸುತ್ತಿದ್ದಾನೆ.

21. ಮತ್ತು ಸೌಭಾಗ್ಯ ಪ್ರಾಪ್ತವಾದಾಗ ಲೋಭ ತೋರುತ್ತಾನೆ-	وَإِذَا مَسَّهُ الْخَيْرُ مَنُوعًا ﴿٢١﴾
22. ಆದರೆ ನಮಾಝ್ ಮಾಡುವವರು (ಈ ದೋಷದಿಂದ ಮುಕ್ತರಾಗಿದ್ದಾರೆ.)	إِلَّا الْمُصَلِّينَ ﴿٢٢﴾
23. ಅವರು ತಮ್ಮ ನಮಾಝನ್ನು ಸದಾ ಪಾಲಿಸುತ್ತಾರೆ.	الَّذِينَ هُمْ عَلَىٰ صَلَاتِهِمْ دَائِمُونَ ﴿٢٣﴾
24. ಅವರ ಸಂಪತ್ತುಗಳಲ್ಲಿ ಒಂದು ನಿಶ್ಚಿತ ಹಕ್ಕಿದೆ.	وَالَّذِينَ فِي أَمْوَالِهِمْ حَقٌّ مَّعْلُومٌ ﴿٢٤﴾
25. ಬೇಡುವವನಿಗೆ ಮತ್ತು ವಂಚಿತನಿಗೆ.	لِّلسَّائِلِ وَالْمَحْرُومِ ﴿٢٥﴾
26. ಅವರು ಪ್ರತಿಫಲ ಸಿಗಲಿರುವ ದಿನವನ್ನು ಸತ್ಯವೆಂದು ನಂಬುತ್ತಾರೆ.	وَالَّذِينَ يُصَدِّقُونَ بِيَوْمِ الدِّينِ ﴿٢٦﴾
27. ಅವರು ತಮ್ಮ ಪ್ರಭುವಿನ ಯಾತನೆಗೆ ಭಯಪಡುತ್ತಾರೆ.	وَالَّذِينَ هُم مِّنْ عَذَابِ رَبِّهِم مُّشْفِقُونَ ﴿٢٧﴾
28. ಏಕೆಂದರೆ, ಅವರ ಪ್ರಭುವಿನ ಯಾತನೆಯು ನಿರ್ಭಯವಾಗಿರತಕ್ಕ ವಸ್ತುವಲ್ಲ.	إِنَّ عَذَابَ رَبِّهِمْ غَيْرُ مَأْمُونٍ ﴿٢٨﴾
29. ಅವರು ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳುತ್ತಾರೆ-	وَالَّذِينَ هُمْ لِفُرُوجِهِمْ حَافِظُونَ ﴿٢٩﴾
30. ತಮ್ಮ ಪತ್ನಿಯರ ಅಥವಾ ತಮ್ಮ ಅಧೀನ ಸ್ತ್ರೀಯರ (ದಾಸಿಯರ) ಹೊರತು. ಇವರಿಂದ ರಕ್ಷಿಸಿಕೊಳ್ಳದಿದ್ದರೆ, ಅವರ ಮೇಲೆ ಆಕ್ಷೇಪವೇನೂ ಇಲ್ಲ.	إِلَّا عَلَىٰ أَزْوَاجِهِمْ أَوْ مَا مَلَكَتْ أَيْمَانُهُمْ فَإِنَّهُمْ غَيْرُ مَلُومِينَ ﴿٣٠﴾
31. ಆದರೆ, ಇದರ ಹೊರತು ಇನ್ನೇನಾದರೂ ಬಯಸುವವರೇ ಸೀಮೋಲ್ಲಂಘಕರು-	فَمَنِ ابْتَغَىٰ وَرَاءَ ذَٰلِكَ فَأُولَٰئِكَ هُمُ الْعَادُونَ ﴿٣١﴾
32. ಅವರು ತಮ್ಮಲ್ಲಿರಿಸಿದ ಅಮಾನತುಗಳ ರಕ್ಷಣೆ ಮಾಡುತ್ತಾರೆ ಮತ್ತು ತಮ್ಮ ವಾಗ್ದಾನಗಳನ್ನು ಪಾಲಿಸುತ್ತಾರೆ.	وَالَّذِينَ هُمْ لِأَمَانَاتِهِمْ وَعَهْدِهِمْ رَاعُونَ ﴿٣٢﴾
33. ಅವರು ತಮ್ಮ ಸಾಕ್ಷ್ಯಗಳಲ್ಲಿ ಸತ್ಯದಲ್ಲೇ ಸ್ಥಿರವಾಗಿರುತ್ತಾರೆ.	وَالَّذِينَ هُم بِشَهَادَاتِهِمْ قَائِمُونَ ﴿٣٣﴾
34. ಅವರು ತಮ್ಮ ನಮಾಝನ್ನು ರಕ್ಷಿಸುತ್ತಾರೆ.	وَالَّذِينَ هُمْ عَلَىٰ صَلَاتِهِمْ يُحَافِظُونَ ﴿٣٤﴾
35. ಇಂತಹವರು ಗೌರವದೊಂದಿಗೆ ಸ್ವರ್ಗೋದ್ಯಾನಗಳಲ್ಲಿರುವರು.	أُولَٰئِكَ فِي جَنَّاتٍ مُّكْرَمُونَ ﴿٣٥﴾ ع

36-37. ಆದುದರಿಂದ ಸಂದೇಶವಾಹಕರೇ, ಈ ಸತ್ಯನಿಷೇಧಿಗಳು ಎಡಬಲಗಳಿಂದ ಗುಂಪು ಗುಂಪಾಗಿ ನಿಮ್ಮ ಕಡೆಗೆ ಧಾವಿಸಿ ಬರುತ್ತಿರುವುದೇಕೆ?[7]

فَمَالِ الَّذِينَ كَفَرُوا قِبَلَكَ مُهْطِعِينَ ﴿٣٦﴾
عَنِ الْيَمِينِ وَعَنِ الشِّمَالِ عِزِينَ ﴿٣٧﴾

38. ಅವರಲ್ಲಿ ಪ್ರತಿಯೊಬ್ಬನೂ ತಾನು ಸಂಪದ್ಭರಿತವಾದ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಗೊಳಿಸಲ್ಪಡುವನೆಂದು ಆಶಿಸುತ್ತಿರುವನೇ?

أَيَطْمَعُ كُلُّ امْرِئٍ مِّنْهُمْ أَن يُدْخَلَ
جَنَّةَ نَعِيمٍ ﴿٣٨﴾

39. ಖಂಡಿತ ಇಲ್ಲ. ನಾವು ಯಾವ ವಸ್ತುವಿನಿಂದ ಇವರನ್ನು ಸೃಷ್ಟಿಸಿರುವೆವೋ ಅದನ್ನಿವರು ಸ್ವತಃ ಬಲ್ಲರು.

كَلَّا ۖ إِنَّا خَلَقْنَاهُم مِّمَّا يَعْلَمُونَ ﴿٣٩﴾

40. ಇಲ್ಲ, ನಾನು ಪೂರ್ವಗಳ ಮತ್ತು ಪಶ್ಚಿಮಗಳ[8] ಒಡೆಯನ ಆಣೆ ಹಾಕುತ್ತೇನೆ, ಶಕ್ತರಾಗಿದ್ದೇವೆ ನಾವು-

فَلَا أُقْسِمُ بِرَبِّ الْمَشَارِقِ وَالْمَغَارِبِ
إِنَّا لَقَادِرُونَ ﴿٤٠﴾

41. ಇವರ ಸ್ಥಾನದಲ್ಲಿ ಇವರಿಗಿಂತ ಉತ್ತಮರನ್ನು ತರಲು! ನಮ್ಮನ್ನು ಮೀರಿಸುವವರು ಯಾರೂ ಇಲ್ಲ.

عَلَىٰ أَن نُّبَدِّلَ خَيْرًا مِّنْهُمْ وَمَا نَحْنُ
بِمَسْبُوقِينَ ﴿٤١﴾

42. ಆದುದರಿಂದ ಇವರೊಡನೆ ವಾಗ್ದಾನ ಮಾಡಲಾಗುತ್ತಿರುವ ತಮ್ಮ ಆ ದಿನವನ್ನು ತಲುಪುವ ವರೆಗೂ ಇವರನ್ನು ಇವರ ಅಸಂಬದ್ಧ ಮಾತುಗಳಲ್ಲಿ ಮತ್ತು ಆಟಗಳಲ್ಲಿ ಬಿದ್ದುಕೊಂಡಿರಲು ಬಿಟ್ಟು ಬಿಡಿರಿ.

فَذَرْهُمْ يَخُوضُوا وَيَلْعَبُوا حَتَّىٰ يُلَاقُوا
يَوْمَهُمُ الَّذِي يُوعَدُونَ ﴿٤٢﴾

43. ಅಂದು ಇವರು ತಮ್ಮ ಸಮಾಧಿಗಳಿಂದ ಹೊರಟು- ತಮ್ಮ ವಿಗ್ರಹಾಲಯಗಳ ಕಡೆಗೆ ಓಡುವಂತೆ, ಓಡಿ ಹೋಗುತ್ತಿರುವರು-

يَوْمَ يَخْرُجُونَ مِنَ الْأَجْدَاثِ سِرَاعًا
كَأَنَّهُمْ إِلَىٰ نُصُبٍ يُوفِضُونَ ﴿٤٣﴾

44. ಇವರ ದೃಷ್ಟಿಗಳು ತಗ್ಗಿರುವುವು. ಅಪಮಾನವು ಇವರನ್ನು ಆವರಿಸಿಕೊಂಡಿರುವುದು. ಇವರಿಗೆ ವಾಗ್ದಾನವೀಯಲಾಗುತ್ತಿರುವ ದಿನ ಅದೇ ಆಗಿದೆ.

خَاشِعَةً أَبْصَارُهُمْ تَرْهَقُهُمْ ذِلَّةٌ ۚ
ذَٰلِكَ الْيَوْمُ الَّذِي كَانُوا يُوعَدُونَ ﴿٤٤﴾ ع

---

7. ಪ್ರವಾದಿವರ್ಯರ(ಸ) ಸಂದೇಶ ಪ್ರಚಾರ ಮತ್ತು ಕುರ್‌ಆನ್ ಪಠಣದ ಸ್ವರ ಕೇಳಿ ಅಪಹಾಸ್ಯ ಮಾಡಲು ಮತ್ತು ಗುಲ್ಲೆಬ್ಬಿಸಲು ನಾಲ್ಕೂ ಕಡೆಯಿಂದ ಓಡೋಡಿ ಬರುತ್ತಿದ್ದವರ ಕುರಿತು ಈ ಮಾತು ಹೇಳಲಾಗಿದೆ.

8. ಒಂದು ವರ್ಷದ ಅವಧಿಯಲ್ಲಿ ಸೂರ್ಯ ಪ್ರತಿದಿನ ಒಂದು ಹೊಸ ಕೋನದಿಂದ ಉದಯಿಸಿ ಹೊಸ ದಿಕ್ಕಿನಲ್ಲಿ ಅಸ್ತಮಿಸುತ್ತದೆ. ಅಲ್ಲದೆ ಭೂಮಿಯ ವಿವಿಧೆಡೆಗಳಲ್ಲಿ ಸೂರ್ಯ ಬೇರೆ ಬೇರೆ ಅವಧಿಯಲ್ಲಿ ಸರಣಿಯಂತೆ ಉದಯಾಸ್ತಮಾನವಾಗುತ್ತಿರುತ್ತದೆ. ಈ ಆಧಾರದಲ್ಲಿ ಪೂರ್ವ ಮತ್ತು ಪಶ್ಚಿಮ ಒಂದಲ್ಲ ಬದಲಾಗಿ ಅನೇಕವಿದೆ. ಆದ್ದರಿಂದ ಪೂರ್ವಗಳು ಮತ್ತು ಪಶ್ಚಿಮಗಳು ಎಂಬ ಪದ ಪ್ರಯೋಗಿಸಲಾಗಿದೆ.